**58 ನೇ ಅಪರ ನಗರ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ**
**ಸಿಸಿಹೆಚ್-59**
**ಎಸ್.ಸಿ.ನಂ. 1271/2022**

ಪಿ.ಡಬ್ಲ್ಯೂ. 1
ಸಿ.ಡಬ್ಲ್ಯೂ. 1
ಪ್ರಮಾಣ ವಚನ ಬೋಧಿಸಲಾಯಿತು
ದಿನಾಂಕಃ 24.10.2025

| | |
|---|---|
| **ಸಾಕ್ಷಿಯ ಹೆಸರು** | ಅಯ್ಯಮ್ಮ |
| **ಗಂಡನ ಹೆಸರು** | ರಾಜುಮರಿ ಹೆಗಡೆ |
| **ವಯಸ್ಸು** | 36 ವರ್ಷ |
| **ವೃತ್ತಿ** | ಜೇರಾಕ್ಸ ಅಂಗಡಿ ನಡೆಸುತ್ತಿದ್ದೇವೆ |
| **ವಾಸ ಸ್ಥಳ** | ಕಟ್ಟಿಗೆನಹಳ್ಳಿ, ಯಲಹಂಕ, ಬೆಂಗಳೂರು |

**ಮುಖ್ಯ ವಿಚಾರಣೆಃ ಮಾನ್ಯ ಪ್ರಾಜ್ಞ ಪಿಪಿ ರವರಿಂದಃ**

ಚಾ.ಸಾ.2 ನನ್ನ ಗಂಡ. ಚಾ.ಸಾ.3 ನನ್ನ ನಾದಿನಿ. ನಾವು ಮೂಲತಃ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು. ಚಾ.ಸಾ.2 ನನ್ನ ಗಂಡ ಮೂಲತಃ ಮಂಡ್ಯದವರಾಗಿದ್ದು ಅವರು ಹೆಬ್ಬಾಳದಲ್ಲಿ ವಾಸ ಇದ್ದರು. 2000 ನೇ ಇಸವಿಯಲ್ಲಿ ವಿದ್ಯಾಭ್ಯಾಸಕ್ಕೆ ಎಂದು ಬೆಂಗಳೂರಿಗೆ ಬಂದಿದ್ದು ಇಲ್ಲೆ ವಾಸ ಇದ್ದೆ. 2013 ರಲ್ಲಿ ನನಗೂ ಮತ್ತು ಚಾ.ಸಾ.2 ರವರಿಗೂ ಮದುವೆಯಾಗಿತ್ತು. ಚಾ.ಸಾ.2 ನಾನು ಮದುವೆಯಾಗುವ ಸಮಯದಲ್ಲಿ ವಿಶೇಷ ಚೇತನರಾಗಿದ್ದುರು(ದಿವ್ಯಾಂಗ). ನಾನು ಮದುವೆಯಾದ ನಂತರ ನಾನು, ನನ್ನ ಗಂಡ, ಅತ್ತೆ ಮಾವ ಒಟ್ಟಿಗೆ 10 ಜನ ಇದ್ದೆವು. 2019 ರಲ್ಲಿ ಕಟ್ಟಿಗೆನಹಳ್ಳಿಯಲ್ಲಿ ನಾನು ಮತ್ತು ನನ್ನ ಗಂಡ ಚಾ.ಸಾ.2 ಒಂದು ಪೆಟ್ಟಿಗೆ ಅಂಗಡಿಯಲ್ಲಿ ದಿನಸಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದೆವು.

2014 ರಲ್ಲಿ ನಾವು ಮನೆಯನ್ನು ಕಟ್ಟಲು ನಿವೇಶನವನ್ನು ಬೆಂಗಳೂರಿನಲ್ಲಿ ಹುಡುಕುತ್ತಿದ್ದೆವು. ಆಗ ನಾಗರಾಜು ಎಂಬುವವರನ್ನು ಬೇಟಿ ಮಾಡಿ ನಿವೇಶನ ಖರೀದಿ

ಕೊಡಿಸಲು ಕೇಳಿದೆವು. ಸದರಿ ನಿವೇಶನವು ನಾಗಶೆಟ್ಟಿ ಹಳ್ಳಿ ಸರ್ವೆ ನಂ.73/3 ಮತ್ತು 73/4 ರಲ್ಲಿ ಲೇಔಟ್ ಮಾಡಿ ನಿವೇಶನಗಳಾಗಿ ವಿಂಗಡನೆ ಮಾಡಿದ್ದರು. ಎಇಸಿಎಸ್ ಸರ್ಕಾರಿ ಸಂಘವು ನಿರ್ಮಾಣ ಮಾಡಿದ್ದ ಲೇಔಟ್‌ನಲ್ಲಿ ನಿವೇಶನ ಸಂ.61 ಅಳತೆ 46x80 ಆಗಿತ್ತು. ಸದರಿ ನಿವೇಶನದ ಮಾಲೀಕರು ಕುಶ್ ದಿನೇಶ್ ಪಟೇಲ್ ಆಗಿದ್ದು ಸದರಿಯವರು ನಾಗರಾಜ್ ಎಂಬುವವರಿಗೆ ಸಾಮಾನ್ಯ ಅಧಿಕಾರ ಪತ್ರ ಮತ್ತು ಪ್ರಮಾಣ ಪತ್ರ ಬರೆದುಕೊಟ್ಟಿದ್ದರು. ನಂತರ ನಾವು ದಾಖಲೆಗಳನ್ನು ಪಡೆದು ವಕೀಲರ ಬಳಿ ಸಮಾಲೋಚನೆ ಮಾಡಿ ಅಭಿಪ್ರಾಯ ಪಡೆದು ನಂತರ ಸದರಿ ನಿವೇಶನವನ್ನು ರೂ.45 ಲಕ್ಷಕ್ಕೆ ಖರೀದಿಗೆ ಮಾತನಾಡಿದೆವು. ನಂತರ ರೂ.15 ಲಕ್ಷ ಹಣವನ್ನು ಸಂಬಂಧಿಕರಿಂದ ಮತ್ತು ಉಳಿದಾಯದಿಂದ ಸಂಗ್ರಹಿಸಿ ನಾಗರಾಜುರವರಿಗೆ ಪಾವತಿ ಮಾಡಿದೆವು. ಈ ಸಂಬಂಧ ಯಾವುದೇ ಒಪ್ಪಂದ ಪತ್ರ ಮಾಡಿಕೊಂಡಿರುವುದಿಲ್ಲ. ದಿಃ27.11.2014 ರಂದು ಬಾಕಿ ರೂ.30 ಲಕ್ಷಗಳನ್ನು ಕೊಟ್ಟು ಚಾ.ಸಾ.3 ರವರ ಹೆಸರಿಗೆ ಕ್ರಯಪತ್ರ ಮಾಡಿಸಿಕೊಂಡೆವು.

2016 ರಲ್ಲಿ ಚಾ.ಸಾ.3 ರವರ ಮದುವೆ ನಿಶ್ಚಯವಾಗಿ ಮದುವೆಯಾಯಿತು. ನಂತರ ಚಾ.ಸಾ.3 ರವರು ಸದರಿ ನಿವೇಶನವನ್ನು ನೊಂದಾಯಿತ ದಾನ ಪತ್ರದ ಮೂಲಕ ಚಾ.ಸಾ.2 ರವರ ಹೆಸರಿಗೆ ವರ್ಗಾವಣೆ ಮಾಡಲಾಯಿತು. ದಾನ ಪತ್ರದ ಆಧಾರ ಮೇಲೆ ಚಾ.ಸಾ.2 ರವರಿಗೆ ಖಾತಾ ವರ್ಗಾವಣೆ ಮಾಡಿಕೊಳ್ಳಲಾಯಿತು. ನಂತರ ನಮ್ಮ ಅತ್ತೆ ಮಾವ ಮತ್ತು ಚಾ.ಸಾ.2 ರವರು ಒಪ್ಪಿ ಸದರಿ ನಿವೇಶನವನ್ನು ನನ್ನ ಹೆಸರಿಗೆ ನೊಂದಾಯಿತ ದಾನ ಪತ್ರದ ಮೂಲಕ ವರ್ಗಾವಣೆ ಮಾಡಲಾಯಿತು. ನಂತರ ದಾನ ಪತ್ರದ ಆಧಾರ ಮೇಲೆ ನನ್ನ ಹೆಸರಿಗೆ ಖಾತಾ ವರ್ಗಾವಣೆ

ಮಾಡಿಕೊಳ್ಳಲಾಯಿತು.

ನಂತರ ನನ್ನ ಮೈದುನನ ಮದುವೆ ಕೂಡ ಆಯಿತು, ಅದೇ ರೀತಿ ನಿವೇಶನ ಖರೀದಿಸುವ ಕಾಲಕ್ಕೆ ಮಾಡಿದ ಸಾಲ ಮತ್ತು ಬಡಿ ಬೆಳೆಯುತ್ತಿತ್ತು, ಅದನ್ನು ತಿರುವಳಿ ಮಾಡಲು ನಾವೆಲ್ಲ ಸದರಿ ನಿವೇಶನವನ್ನು ಮಾರಾಟ ಮಾಡಲು 2017 ಕ್ಕೆ ತಿರ್ಮಾನ ಮಾಡಿದೆವು. ಆಗ ವಯ್ಯಾಲಿಕಾವಲ್‌ನಲ್ಲಿ ಮೆಡಿಕಲ್ ಸ್ಟೋರ್ ಇಟ್ಟುಕೊಂಡು ರಿಯಲ್ ಎಸ್ಟೇಟ್ ವ್ಯವಹಾರ ಮಾಡುವ ಕೇಶವ ಮೂರ್ತಿ ಎಂಬುವವರ ಪರಿಚಯವಾಯಿತು. ಸದರಿ ಕೇಶವ ಮೂರ್ತಿಯವರು ನಮ್ಮ ನಿವೇಶನದ ದಾಖಲೆಗಳನ್ನು ನಮ್ಮಿಂದ ಪಡೆದುಕೊಂಡು ಖರೀದಿದಾರರನ್ನು ಹುಡುಕಿ ಹೇಳುತ್ತೇನೆ ಎಂದು ಹೇಳಿದರು. ಚದುರಡಿಗೆ ರೂ.12,000/- ಪ್ರತಿಫಲವನ್ನು ಕೇಳಿದೆವು ಅದಕ್ಕೆ ಕೇಶವ ಮೂರ್ತಿಯವರು ನಮ್ಮ ನಿವೇಶನ ದಾಖಲೆಗಳನ್ನು ಪರಿಶೀಲನೆ ಮಾಡಿ ಅದರಲ್ಲಿ ಕುಶ್ ದಿನೇಶ್ ಪಾಟೀಲ್‌ರವರ ಮೂಲ ದಾಖಲೆಗಳು ಇರದೇ ಇರುವ ಕಾರಣ ಕಡಿಮೆ ಬೆಲೆಗೆ ಮಾರಾಟ ಮಾಡಿಸಿಕೊಡುವುದಾಗಿ ತಿಳಿಸಿದರು.

ಇದಾದ 2-3 ತಿಂಗಳ ನಂತರ ಕೇಶವ ಮೂರ್ತಿ 1 ರಿಂದ 3 ನೇ ಆರೋಪಿಗಳನ್ನು ಕರೆದುಕೊಂಡು ಬಂದು ಪರಿಚಯ ಮಾಡಿಸಿ ಅವರಿಗೆ ಕಾಫಿ ತೋಟ ಮತ್ತು ರಿಯಲ್ ಎಸ್ಟೇಟ್ ವ್ಯವಹಾರ ಮತ್ತು ಆದಾಯ ಚೆನ್ನಾಗಿ ಇರುವ ಕಾರಣ ಖರೀದಿ ಮಾಡುತ್ತಾರೆ ಎಂದು ತಿಳಿಸಿದರು. ನಂತರ ಆರೋಪಿಗಳು ನಿವೇಶನಕ್ಕೆ ಸಂಬಂದಿಸಿದ ಎಲ್ಲಾ ದಾಖಲೆಗಳನ್ನು ಪಡೆದು ಪರಿಶೀಲನೆ ಮಾಡಿ ಆರೋಪಿಗಳು ಸಹ ಮೂಲ ದಾಖಲೆಗಳು ಇಲ್ಲ ಕಡಿಮೆ ಬೆಲೆಗೆ ಆದರೆ ನಗದನ್ನು ಒಂದೇ ಬಾರಿ ಪಾವತಿ ಮಾಡಿ ಕ್ರಯಪತ್ರ ಮಾಡಿಕೊಳ್ಳುವುದಾಗಿ ತಿಳಿಸಿದರು. ನಿವೇಶನ ವ್ಯವಹಾರವನ್ನು

ಮಾತನಾಡಲು ನಾನು, ಚಾ.ಸಾ.2, 3 ಮತ್ತು 1 ರಿಂದ 3 ನೇ ಆರೋಪಿಗಳು ಹಾಗೂ ಕೇಶವ ಮೂರ್ತಿ ಸೇರಿ ರೂ.2,50,00,000/- ಪ್ರತಿಫಲಕ್ಕೆ ಒಪ್ಪಿ ಕೊಂಡೆವು.

ನಿವೇಶನದ ಮಾತುಕತೆಯಾದ ನಂತರ 1 ರಿಂದ 3 ನೇ ಆರೋಪಿಗಳು ನಿವೇಶನಕ್ಕೆ ಸಂಬಂದಿಸಿದ ಮೂಲ ದಾಖಲೆಗಳನ್ನು ಲೋನ್ ಮಾಡಿಸಬೇಕು ಎಂದು ಪಡೆದುಕೊಂಡರು. ಮಾತುಕತೆಯಾದ ಒಂದು ತಿಂಗಳ ಒಳಗಾಗಿ ನನ್ನ ಹೆಸರಿನಲ್ಲಿ ಖಾತೆ ಮಾಡಿಸಬೇಕು ಎಂದು ಆರೋಪಿಗಳು ನನ್ನನ್ನು ರಾಜಾಜಿನಗರದ ಇಂಡಿಯನ್ ಬ್ಯಾಂಕ್‌ನಲ್ಲಿ ಖಾತೆ ತೆರೆಸಿದರು. ಇದಾದ ನಂತರ ಎರಡು ತಿಂಗಳವರೆಗೆ ಯಾವುದೇ ಪ್ರತಿಕ್ರಿಯ ಆರೋಪಿಗಳಿಂದ ಇರಲಿಲ್ಲ. ಸಂಬಂದಿಕರೆಲ್ಲ ನಾವು ಮಾಡಿದ ಸಾಲವನ್ನು ಮರುಪಾವತಿಸುವಂತೆ ಆಗ್ರಹ ಮಾಡಿದರು. ನಂತರ ನಾವು ಕೇಶವ ಮೂರ್ತಿ ಬಳಿ ಹೋಗಿ ನಮ್ಮ ದಾಖಲೆಗಳನ್ನು ವಾಪಸ್ಸು ಮಾಡಿ ನಮಗೆ ಹಣದ ಅವಶ್ಯಕತೆ ಇದೆ ಎಂದು ತಿಳಿಸಿದಾಗ ಸದರಿ ಕೇಶವ ಮೂರ್ತಿ 1 ಮತ್ತು 3 ನೇ ಆರೋಪಿಗಳಿಗೆ ಕರೆ ಮಾಡಿ ತಿಳಿಸಿದ್ದು ಅದಕ್ಕೆ ಕಾಲಾವಕಾಶ ಕೇಳಿದರು ಎಂದು ನಮಗೆ ತಿಳಿಸಿದರು. ಸ್ವಲ್ಪ ದಿನಗಳ ನಂತರ ನಿವೇಶನದ ಸರ್ಕಾರಿ ಬೆಲೆ ಮತ್ತು ನಾವು ಒಪ್ಪಿದ ಬೆಲೆಯಲ್ಲಿ ವ್ಯತ್ಯಾಸ ಇರುವ ರೂ.83,00,000/- ಹಣವನ್ನು ಡ್ರಾ ಮಾಡಲು ಅನುಕೂಲವಾಗುವಂತೇ ಜಂಟಿ ಖಾತೆಯನ್ನು ಮಲ್ಲೇಶ್ವರಂನಲ್ಲಿ ಇರುವ ಪಂಜಾಬ್ ನ್ಯಾಷನಲ್ ಬ್ಯಾಂಕ್ನಲ್ಲಿ ಮಾಡಿಸಬೇಕು ಎಂದು ತಿಳಿಸಿದರು.

ದಿಃ28.03.2018 ರಂದು 4 ನೇ ಆರೋಪಿ ಮತ್ತು ನನ್ನ ಹೆಸರಿನಲ್ಲಿ ಸದರಿ ಬ್ಯಾಂಕಿನಲ್ಲಿ ಜಂಟಿ ಖಾತೆಯನ್ನು ತೆರೆಸಿದರು. ಆ ದಿನ ಚಾ.ಸಾ.2, ನಾನು, 1,3

ಮತ್ತು 4 ನೇ ಆರೋಪಿಗಳು ಸಹ ಇದ್ದರು. ನನ್ನನ್ನು ಬ್ಯಾಂಕಿನ ಮ್ಯಾನೇಜರ್ ಕೊಠಡಿ ಹೊರಗಡೆ ಕೂಡಿಸಿ 1, 3 ಮತ್ತು 4 ನೇ ಆರೋಪಿಗಳು ನನ್ನಿಂದ ಆಧಾರ್ ಕಾರ್ಡ ಮತ್ತು ಪ್ಯಾನ್ ಕಾರ್ಡನ ಪ್ರತಿಗಳನ್ನು ಪಡೆದುಕೊಂಡು ಮ್ಯಾನೇಜರ್ ಕೊಠಡಿಯಲ್ಲಿ ಕುಳಿತು ಮಾತನಾಡುತ್ತಿದ್ದರು. ನಂತರ ಜಂಟಿ ಖಾತೆಯ ಅರ್ಜಿಯನ್ನು ಆರೋಪಿಗಳೇ ತುಂಬಿ ನನ್ನಿಂದ ಸಹಿ ಮಾಡಿಸಿಕೊಂಡು ನಂತರ ಖಾತೆಗೆ ರೂ.10,000/- ಜಮಾ ಮಾಡಿದರು. ಸ್ವಲ್ಪ ಸಮಯದ ನಂತರ ಜಂಟಿ ಖಾತೆಯ ಚೆಕ್ ಬುಕ್ ಮತ್ತು ಪಾಸ್ ಬುಕ್‌ನ್ನು ತೆಗೆದುಕೊಂಡು ಬಂದು ರೂ.83,00,000/-ಗಳನ್ನು ಡ್ರಾ ಮಾಡಬೇಕು ಎಂದು 1 ಮತ್ತು 3 ನೇ ಆರೋಪಿಗಳು ನನ್ನಿಂದ 10 ಖಾಲಿ ಚೆಕ್ಕುಗಳಿಗೆ ನನ್ನ ಸಹಿಗಳನ್ನು ಪಡೆದು ಅವರೇ ಇಟ್ಟುಕೊಂಡರು. ನಂತರ ಖಾತೆ ತೆರೆದ ಮರುದಿನ ರೂ.83,00,000/-ಗಳನ್ನು 1 ಮತ್ತು 3 ನೇ ಆರೋಪಿಗಳು ಜಮಾ ಮಾಡಿದರು. ನಂತರ ರೂ.2,50,00,000/-ಗಳನ್ನು ನಿಮ್ಮ ಖಾತೆಯಲ್ಲಿ ಮೂರು ತಿಂಗಳು ಇರಬೇಕು ಮತ್ತು ನಾವು ಜಮಾ ಮಾಡಿ ರೂ.83,00,000/-ಗಳನ್ನು ಮಾತ್ರ ಡ್ರಾ ಮಾಡುತ್ತೇವೆ ಎಂದು ಹೇಳಿ ನನ್ನಿಂದ ಖಾಲಿ ಚೆಕ್ಕಗೆ ಸಹಿ ಪಡೆದುಕೊಂಡರು.

ದಿಃ31.03.2018 ರಂದು ಸಾಲದ ಹಣ ಬಂದಿರುವುದಾಗಿ ತಿಳಿಸಿ ಕ್ರಯಪತ್ರ ಬರೆಸಿಕೊಡುವಂತೆ ಗಾಂಧಿನಗರದ ಸಬ್ ರಿಜಿಸ್ಟರ್ ಕಛೇರಿಗೆ ಬರುವಂತೆ ತಿಳಿಸಿದರು. ಅದರಂತೆ ನಾನು ಮತ್ತು ಚಾ.ಸಾ.2 ಹೋಗಿದ್ದೆವು. ಅಲ್ಲಿ 1 ರಿಂದ 3 ನೇ ಆರೋಪಿಗಳು ಮತ್ತು ಕೇಶವ ಮೂರ್ತಿ ಹಾಜರು ಇದ್ದರು. ಸಾಕ್ಷಿ ಒಬ್ಬ ವ್ಯಕ್ತಿಯನ್ನು ಆರೋಪಿಗಳು ಕರೆತಂದಿದ್ದರು. ಬ್ಯಾಂಕ್ ಖಾತೆಗೆ ಅಂದಾಜು ರೂ.2.47 ಕೋಟಿ ಜಮಾ ಆಗಿರುವುದನ್ನು ನೋಡಿದ್ದೆನು. ಈ ವಿಷಯವನ್ನು ಕ್ರಯಪತ್ರದಲ್ಲಿ ನಮೂದಿಸಿ

ನಂತರ ಕ್ರಯಪತ್ರವನ್ನು ಬರೆದುಕೊಟ್ಟೆನು. ಕ್ರಯಪತ್ರ ನೊಂದಣಿಯ ಎಲ್ಲಾ ಪ್ರಕ್ರಿಯೆಯನ್ನು ಮುಗಿಸಿ ಅಲ್ಲಿಂದ ಹೊರಟು ಬರುವಾಗ ಜಂಟಿ ಖಾತೆಯಲ್ಲಿ ಇದ್ದ ಎಲ್ಲಾ ಹಣವು ಆರೋಪಿಗಳ ಬೇರೆ ಬೇರೆ ಖಾತೆ ವರ್ಗಾಣೆಯಾದ ಮೆಸೇಜ್ ಬರುತ್ತಿತ್ತು. ಆಗ ನಾನು 1 ರಿಂದ 3 ನೇ ಆರೂಪಿಗಳ ಬಳಿ ವಿಚಾರಿಸಿದಾಗ ನಾವು ರೂ.83,00,000/-ಗಳನ್ನು ಮಾತ್ರ ವರ್ಗಾವಣೆ ಮಾಡಿಕೊಂಡಿದ್ದು ಇನ್ನು ಉಳಿದ ಮೆಸೇಜ್‌ಗಳು ಫೇಕ್ ಮೆಸೇಜ್ ಎಂದು ತಿಳಿಸಿ ಅದನ್ನು ವಿಚಾರಿ ಎಂದು ಹೇಳಿದರು.

ನಂತರ ನಾನು ಬ್ಯಾಂಕಿಗೆ ಹೋಗಿ ವಿಚಾರಣೆ ಮಾಡಿಸಿದಾಗ ರೂ.5,000/-ಗಳು ಮಾತ್ರ ಇದ್ದು ಉಳಿದ ಹಣ ವರ್ಗಾವಣೆಯಾಗಿತ್ತು. ನಂತರ ನಾವು ಕೇಶವ ಮೂರ್ತಿ ಬಳಿ ವಿಚಾರಿಸಿ ಹಾಗೂ 1 ರಿಂದ 3 ನೇ ಆರೋಪಿಗಳ ಬಳಿ ಹೋಗಿ ವಿಚಾರಿಸಿದಾಗ ನಮ್ಮಿಂದ ತಪ್ಪಾಗಿದೆ ಎಂದು ಹೇಳಿ 4 ನೇ ಆರೋಪಿಯ ಖಾತೆಗೆ ಸಂಬಂದಿಸಿದ ಒಟ್ಟು 10 ಚೆಕ್ಕುಗಳನ್ನು ರೂ.1,25,00,000/- ಕೊಟ್ಟಿರುತ್ತಾರೆ. ನಂತರ ಖಾತೆಯಲ್ಲಿ ಅಷ್ಟು ಹಣ ಇಲ್ಲ ಎಂದು ಆರೋಪಿಗಳು ನಮ್ಮಿಂದ ಸದರಿ 10 ಚೆಕ್ಕುಗಳನ್ನು ವಾಪಸ್ಸು ಪಡೆದು 1 ನೇ ಆರೋಪಿಯ ಖಾತೆಯ ಮೂರು ಚೆಕ್ಕುಗಳನ್ನು ರೂ.2,25,00,000/- ಮತ್ತು ಒಂದು ಚೆಕ್ಕು ರೂ.25,00,000/-ಕೊಟ್ಟಿರುತ್ತಾರೆ. ನಂತರ ನಾಲ್ಕು ಚೆಕ್ಕುಗಳನ್ನು ಬ್ಯಾಂಕಿಗೆ ನೀಡಿದಾಗ ಸಾಕಷ್ಟು ಹಣ ಇಲ್ಲ ಎಂದು ವಾಪಸ್ಸು ಮಾಡಿರುತ್ತಾರೆ. ನಂತರ ಆರೋಪಿಗಳ ಬಳಿ ಹೋಗಿ ಕೇಳಲಾಗಿ ಪುನಃ ಬಂದು ಇದೇ ರೀತಿ ಹಣ ಕೇಳಿ ತೊಂದರೆ ಕೊಟ್ಟರೆ ನಿಮ್ಮನ್ನು ಜೀವಸಹಿತ ಬಿಡುವುದಿಲ್ಲ ಎಂದು ಕೊಲೆ ಬೆದರಿಗೆ ಹಾಕಿರುತ್ತಾರೆ.

ನಂತರ ನಾವು ದೂರನ್ನು ನೀಡಲು ಪೊಲೀಸ್ ಠಾಣೆಗೆ ಹೋದಾಗ

ಪೊಲೀಸರು ಆರೋಪಿಗಳು ಠಾಣೆಗೆ ಕರೆಸಿ ಹಣವನ್ನು ಕೊಟ್ಟು ರಾಜಿ ಮಾಡಿಕೊಳ್ಳುವಂತೆ ತಿಳಿಸಿ ಕಳುಹಿಸಿದರು. ನಂತರ ನಾವು ವಕೀಲರ ಮೂಲಕ ಒಂದು ಖಾಸಗಿ ದೂರನ್ನು ದಾಖಲಿಸಿದೆವು. ಖಾಸಗಿ ದೂರಿನ ದೃಢೀಕೃತ ನಕಲನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಗುರುತಿಸಲಾಯಿತು. ನಿ.ಪಿ.1 ರಲ್ಲಿ ಎಲ್ಲಾ ವಿಷಯಗಳನ್ನು ನಮೂದಿಸಿ ಜೊತೆಗೆ ನಕಲು ದಾಖಲೆಗಳನ್ನು ಹಾಗೂ ಪ್ರಮಾಣ ಪತ್ರವನ್ನು ಸಹ ಸಲ್ಲಿಸಿದ್ದೇನೆ. ನಿವೇಶನದ ಮೂಲ ದಾಖಲೆಗಳು ಆರೋಪಿಗಳ ಬಳಿ ಇರುತ್ತವೆ.

ನಿ.ಪಿ.1 ನ್ನು ಕೊಟ್ಟ ನಂತರ ಪೊಲೀಸರು ಘಟನಾ ಸ್ಥಳವಾದ ನಿವೇಶಕ್ಕೆ ಬಂದಿದ್ದು ಆಗ ನಾನು ಹಾಜರು ಇದ್ದು ಸ್ಥಳ ತೋರಿಸಿದ ಮೆರೆಗೆ ಪೊಲೀಸರು ಸ್ಥಳ ಪಂಚನಾಮೆ ಮಾಡಿದರು. ಸಾಕ್ಷಿ ಈಗ ನೋಡಿ ಗುರುತಿಸಿದ್ದು, ಸದರಿ ಮಹಜರ್ ನ್ನು ನಿ.ಪಿ.2 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ನಂತರ ನಾವು ಸಿವಿಲ್ ದಾವೆಯನ್ನು ಸಹ ಓ.ಎಸ್.4832/2019 ರೀತ್ಯ ಸಿಸಿಹೆಚ್-7 ರ ಮುಂದೆ ದಾಖಲು ಮಾಡಿದ್ದು, ಸದರಿ ದಾವೆ ಡಿಕ್ರಿಯಾಗಿರುತ್ತದೆ. ಸದರಿ ದಾವೆಯ ದಾವಾ ಪತ್ರ, ಮುಖಿಕ ಸಾಕ್ಷ್ಯ ದಾಖಲೆಗಳು, ತೀರ್ಪು ಮತ್ತು ಆಜ್ಞಾಪ್ತಿಗಳ ದೃಢೀಕೃತ ನಕಲುಗಳನ್ನು ಈಗ ಸಾಕ್ಷಿ ಹಾಜರು ಮಾಡಿದ್ದು ಸದರಿ ದಾಖಲೆಗಳ ದೃಢೀಕೃತ ನಕಲುಗಳನ್ನು ಒಟ್ಟಾಗಿ ನಿ.ಪಿ.3 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ಹಣ ವರ್ಗಾವಣೆಯಾದ ಪಂಜಾಬ್ ನ್ಯಾಷನಲ್ ಬ್ಯಾಂಕ್ ಜಂಟಿ ಖಾತೆ ನಂ.1261000109030407 ನ ಸ್ಟೇಟ್‌ಮೆಂಟ್ ಮತ್ತು ಇತರೆ ಖಾತೆ ವಿವರಗಳ ದೃಢೀಕೃತ ನಕಲುಗಳನ್ನು ಒಟ್ಟಾಗಿ ನಿ.ಪಿ.4 ಎಂದು ಗುರುತಿಸಲಾಯಿತು.

ಸಾಕ್ಷಿ ಈಗ ಎಸ್ ಬಿ. ಐ ಬ್ಯಾಂಕ್, ಕುಮಾರ ಪಾರ್ಕ ಶಾಖೆಯಲ್ಲಿ ಇರುವ ಖಾತೆ ನಂ.10323661675 ರ ಸ್ಟೇಟ್‌ಮೆಂಟ್ ಮತ್ತು ಇತರೆ ಖಾತೆ ವಿವರಗಳ ದೃಢೀಕೃತ ನಕಲುಗಳನ್ನು ಒಟ್ಟಾಗಿ ನಿ.ಪಿ.5 ಎಂದು ಗುರುತಿಸಲಾಯಿತು. ಸಾಕ್ಷಿ ಈಗ ಕೆನರಾ ಬ್ಯಾಂಕ್ ಮಾದವನಗರ ಶಾಖೆಯಲ್ಲಿ ಇರುವ ಖಾತೆ ನಂ.07788261010904 ರ ಸ್ಟೇಟ್‌ಮೆಂಟ್ ಮತ್ತು ಇತರೆ ಖಾತೆ ವಿವರಗಳ ದೃಢೀಕೃತ ನಕಲುಗಳನ್ನು ಒಟ್ಟಾಗಿ ನಿ.ಪಿ.6 ಎಂದು ಗುರುತಿಸಲಾಯಿತು. ಸಾಕ್ಷಿ ಈಗ ವಿಜಯ ಬ್ಯಾಂಕ್, ಆರ್.ಸಿ ರಸ್ತೆ ಶಾಖೆಯಲ್ಲಿ ಇರುವ ಖಾತೆ ನಂ.117800301000226 ರ ಸ್ಟೇಟ್‌ಮೆಂಟ್ ಮತ್ತು ಇತರೆ ಖಾತೆ ವಿವರಗಳ ದೃಢೀಕೃತ ನಕಲುಗಳನ್ನು ಒಟ್ಟಾಗಿ ನಿ.ಪಿ.7 ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಆರೋಪಿಗಳ ಪರ ವಕೀಲರಿಂದಃ</u>**

ಆರೋಪಿಗಳ ಪರ ವಕೀಲರು ಹಾಜರು ಇದ್ದು ಸಮಯ ಕೋರಿದ ಮೆರೆಗೆ ಪಾಟಿಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ. ಹೇ. ಕೇ. ಸ. ಇ.**

**58 ನೇ ಅ.ನ.ಸಿ.ಸೆ.ನ್ಯಾಯಾಧೀಶರು,**
**ಬೆಂಗಳೂರು.**